ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 787
ಸದಸ್ಯರ ಹೆಸರು : ಶ್ರೀ. ಅಲ್ಲಂ ವೀರಭದ್ರಪ್ಪ
ಉತ್ತರಿಸಬೇಕಾದ ದಿನಾಂಕ : 17.12.2018
ಉತ್ತರಿಸುವ ಸಚಿವರು : ಕೃಷಿ ಸಚಿವರು

ಪ್ರಶ್ನೆ	ಉತ್ತರ
ಅ) ರಾಜ್ಯದಲ್ಲಿ ಬರಗಾಲದಲ್ಲಿಯು ಸಹ ಕೆಲವು ಸಲ ಮಳೆ ಬಂದು ರೈತರು ಬಿತ್ತನೆ ಮಾಡುವಂಥದ್ದು. ಬಿತ್ತನೆ ಮಾಡಿದಂತಹ ಕಾಲದಲ್ಲಿ ಮಳೆ ಬಾರದೆ ಬೆಳೆ ನಷ್ಟವಾದಂತಹ ಸಮಯದಲ್ಲಿ ಸರ್ಕಾರ ಯಾವ ಕ್ರಮ ಕೈಗೊಳ್ಳುತ್ತದೆ:	ರಾಜ್ಯದಲ್ಲಿ ಬಿತ್ತನೆ ಮಾಡಿದ ನಂತರ ಮಳೆ ಬಾರದೆ ಬೆಳೆ ಹಾನಿಯಾದಲ್ಲಿ ಕೇಂದ್ರ ಸರ್ಕಾರದ NDRF ನಿಯಮಾವಳಿಗಳ ಅನ್ವಯ ಬರಪೀಡಿತ ಪ್ರದೇಶಗಳನ್ನು ಗುರುತಿಸಿ ಕಂದಾಯ ಇಲಾಖೆಯು ಬರಪೀಡಿತ ತಾಲ್ಲೂಕುಗಳನ್ನು ಘೋಷಿಸಲಾಗುತ್ತದೆ. ನಂತರ, ಘೋಷಣೆಯಾದ ತಾಲ್ಲೂಕುಗಳಲ್ಲಿ ಬೆಳೆ ಸಮೀಕ್ಷೆ ನಡೆಸಿ ಬೆಳೆ ಹಾನಿ ನಷ್ಟವನ್ನು ಅಂದಾಜಿಸಿ ಪರಿಹಾರಕ್ಕಾಗಿ ಪ್ರಸ್ತಾವನೆ ತಯಾರಿಸಿ ಕೇಂದ್ರ ಸರ್ಕಾರಕ್ಕೆ ಸಲ್ಲಿಸಲಾಗುತ್ತದೆ. ಮುಂದುವರೆದು, ಬೆಳೆವಿಮೆ ಯೋಜನೆಯಡಿ ಪ್ರತಿ ಹಂಗಾಮಿಗೆ ಗುರುತಿಸಲಾಗುವ ಬೆಳೆಗಳಿಗೆ ವಿಮಾ ಸೌಲಭ್ಯಕ್ಕೆ ನೊಂದಾಯಿಸಲು ಪ್ರಚಾರ ಕಾರ್ಯಕ್ರಮಗಳ ಮೂಲಕ ರೈತರಲ್ಲಿ ಅರಿವು ಮೂಡಿಸಲಾಗುತ್ತದೆ. ಬೆಳೆ ಸಾಲ ಪಡೆದ ರೈತರನ್ನು ಕಡ್ಡಾಯವಾಗಿ ಹಾಗೂ ಸಾಲ ಪಡೆಯದ ರೈತರನ್ನು ಬೆಳೆ ವಿಮೆಗೆ ನೊಂದಾಯಿಸಲಾಗುತ್ತದೆ. ಮಳೆ ಬಾರದೆ ಬೆಳೆ ನಷ್ಟವಾದ ಸಂದರ್ಭಗಳಲ್ಲಿ ನಿಯಮಾನುಸಾರ ಬೆಳೆ ವಿಮಾ ಸೌಲಭ್ಯದ ಪರಿಹಾರ ನೀಡಲಾಗುತ್ತಿದೆ.
ಆ) ಇಂತಹ ಸನ್ನಿವೇಶಗಳಲ್ಲಿ ಬೆಳೆ ವಿಮೆ ಮಾಡುವುದಕ್ಕೆ ಸರ್ಕಾರದ ಮುಂದಿರುವ ಚಿಂತನೆ ಏನು?	ಆರಂಭಿಕ ವರ್ಷಗಳಲ್ಲಿ ಬೆಳೆವಿಮೆ ಯೋಜನೆ ಅನುಷ್ಠಾನದಲ್ಲಿ ಕೆಲವೊಂದು ತೊಡಕುಗಳು ಕಾಣಿಸಿಕೊಂಡಿದ್ದು, ಅವುಗಳನ್ನು ಪರಿಹರಿಸಲು ಹಾಗೂ ರೈತರಿಗೆ ಈ ಯೋಜನೆ ಹೆಚ್ಚಿನ ಪ್ರಯೋಜನಕಾರಿಯಾಗಲು ಸರ್ಕಾರ ಈ ಮುಂದಿನಂತೆ ಕ್ರಮಗಳನ್ನು ವಹಿಸಿದೆ. 1. ಬೆಳೆವಿಮೆ ನೋಂದಣಿಯನ್ನು ಸಂರಕ್ಷಣೆ ತಂತ್ರಾಂಶದ ಮೂಲಕ ಮಾಡಲಾಗುತ್ತಿದ್ದು, ಅಧಿಸೂಚನೆ ಹೊರಡಿಸುವ ಕ್ರಮದಿಂದ ಆರಂಭಿಸಿ ಬೆಳೆವಿಮೆ ಪರಿಹಾರ ಲೆಕ್ಕಾಚಾರ ಹಾಕುವವರೆಗೂ ಬೆಳೆವಿಮೆ ವ್ಯವಸ್ಥೆಯನ್ನು ಅಳವಡಿಸಲಾಗಿದೆ. 2. ಈ ಹಿಂದೆ, ಬೆಳೆ ಕಟಾವು ಪ್ರಯೋಗಗಳು ಕ್ಷೇತ್ರ ಮಟ್ಟದಲ್ಲಿ ಸಮರ್ಪಕವಾಗಿ ನಡೆಯುತ್ತಿಲ್ಲವಾದ್ದರಿಂದ, ಪ್ರಸ್ತುತ ಎಲ್ಲಾ ಬೆಳೆ ಕಟಾವು ಪ್ರಯೋಗಗಳನ್ನು ಮೊಬೈಲ್ ತಂತ್ರಾಂಶವನ್ನು ಬಳಸಿ ಕೈಗೆತ್ತಿಕೊಳ್ಳಲಾಗುತ್ತಿದೆ.

	3. ಈ ಹಿಂದೆ, ವಿಮಾ ಸಂಸ್ಥೆಗಳು, ವಿಮಾ ಪರಿಹಾರ ಮೊತ್ತದ ಲೆಕ್ಕಾಚಾರ ಮಾಡಿದ ನಂತರ ಆಕ್ಷೇಪಣೆಗಳನ್ನು ಸಲ್ಲಿಸುತ್ತಿರುವುದು ಗಮನಿಸಿ, ಬೆಳೆ ವಿಮಾ ಸಂಸ್ಥೆಗಳು ಬೆಳೆ ಕಟಾವು ಪ್ರಯೋಗಗಳಿಗೆ ಸಂಬಂಧಿಸಿದಂತೆ, ಯಾವುದೇ ರೀತಿಯ ಆಕ್ಷೇಪಣೆಗಳನ್ನು ಕ್ಷೇತ್ರ ಮಟ್ಟದಿಂದಲೇ ಮೊಬೈಲ್ ಆಪ್ ಮೂಲಕವೇ ಸಲ್ಲಿಸಲು ಅವಕಾಶ ಮಾಡಿಕೊಡಲಾಗಿದೆ. ಒಂದು ವೇಳೆ ವಿಮಾ ಸಂಸ್ಥೆಗಳು, ಕ್ಷೇತ್ರದಲ್ಲಿ ಹಾಜರಾಗಲು ಸಾಧ್ಯವಾಗದೇ ಇದ್ದಲ್ಲಿ, ಬೆಳೆ ಕಟಾವು ಪ್ರಯೋಗಗಳ ಛಾಯಾಚಿತ್ರಗಳು ಮತ್ತು ವಿಡಿಯೋಗಳನ್ನು ವೀಕ್ಷಿಸಿ ಮೂರು ದಿನಗಳೊಳಗಾಗಿ ಆಕ್ಷೇಪಣೆಗಳನ್ನು ಸಲ್ಲಿಸುವ ವ್ಯವಸ್ಥೆ ತರಲಾಗಿದ್ದು, ವಿಮಾ ಪರಿಹಾರ ಲೆಕ್ಕಾಚಾರ ಮಾಡಿದ ನಂತರ ಆಕ್ಷೇಪಣೆ ಸಲ್ಲಿಸಲು ಅವಕಾಶವಿರುವುದಿಲ್ಲ. ಇದರಿಂದ, ರೈತರಿಗೆ ಸಕಾಲದಲ್ಲಿ ಬೆಳೆವಿಮಾ ಪರಿಹಾರವನ್ನು ನೀಡಲು ಸಾಧ್ಯವಾಗುತ್ತದೆ. 4. ಕೆಲವು ಹಣಕಾಸು ಸಂಸ್ಥೆಗಳು (ಬ್ಯಾಂಕ್ಸ್) ರೈತರಿಂದ ವಿಮಾ ಕಂತನ್ನು ಸಕಾಲದಲ್ಲಿ ಪಡೆದಿದ್ದರೂ, ವಿಮಾ ಸಂಸ್ಥೆಗಳಿಗೆ ತಡವಾಗಿ ಹಣ ಪಾವತಿಸುತ್ತಿರುವುದನ್ನು ಗಮನಿಸಿ ಸಂರಕ್ಷಣೆ ತಂತ್ರಾಂಶದ ಮೂಲಕ ಕೇಂದ್ರ ಸರ್ಕಾರದ 'PayGov' ವ್ಯವಸ್ಥೆ ಮೂಲಕ ವಿಮಾ ಸಂಸ್ಥೆಗಳಿಗೆ ಹಣ ಪಾವತಿಸುವ ವ್ಯವಸ್ಥೆ ಕಲ್ಪಿಸಲಾಗಿದ್ದು, ರೈತರ ಅರ್ಜಿಗಳೊಂದಿಗೆ ಕಡ್ಡಾಯವಾಗಿ ಸಕಾಲದಲ್ಲಿ ಹಣ ಪಾವತಿ ಖಚಿತ ಪಡಿಸಬಹುದಾಗಿರುತ್ತದೆ ಹಾಗೂ ಈ ರೀತಿ ಮಾಡದಂತಹ ಪ್ರಕರಣಗಳನ್ನು ಗುರುತಿಸಿ ಅದನ್ನು ಇತ್ಯರ್ಥಪಡಿಸಲು ಸಾಧ್ಯವಾಗುತ್ತದೆ. 5. ಬೆಳೆಸಾಲ ಪಡೆಯದ ರೈತರು ಬೆಳೆವಿಮಾ ಯೋಜನೆಯಡಿ ನೋಂದಾಯಿಸಲು ಅನುಕೂಲವಾಗುವಂತೆ Common Service Centre (CSC) ಗಳಲ್ಲಿ ನೋಂದಣಿಗೆ ಅವಕಾಶ ಕಲ್ಪಿಸಿಕೊಡಲಾಗಿದೆ.

ಕೃಇ 127 ಕೃಕೈಉ 2018

(ಎನ್. ಎಚ್. ಶಿವಶಂಕರ ರೆಡ್ಡಿ)
ಕೃಷಿ ಸಚಿವರು